# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1742 (1978)
ವಿಧಾನ ಪರಿಷತ್ ಸದಸ್ಯರ ಹೆಸರು : ಡಾ: ಉಮಾಶ್ರೀ (ನಾಮನಿರ್ದೇಶಿತರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಉತ್ತರಿಸುವ ದಿನಾಂಕ : 24.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಮಹಾನಗರಗಳಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ ಭೂ ಬಳಕೆ ಬದಲಾವಣೆ ಪ್ರಕ್ರಿಯೆಯನ್ನು ಮತ್ತು ಕಾಲ ಮಿತಿಯನ್ನು ಕಡಿತಗೊಳಿಸಲು ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ? | ಸರ್ಕಾರದ ಆದೇಶ ಸಂಖ್ಯೆ UDD 594 MNJ 2025, ಬೆಂಗಳೂರು ದಿನಾಂಕ 29/01/2026 ರ ಪ್ರಕಾರ, ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ ಭೂ ಬಳಕೆ ಬದಲಾವಣೆ (Change of Land Use - CLU) ಮಾಡಲು ಇರುವ ಅವಧಿಯನ್ನು 120 ದಿನಗಳಿಂದ 45 ದಿನಗಳಿಗೆ ಕಡಿತಗೊಳಿಸಿ ಸರಳೀಕರಿಸಲು ಆದೇಶ ಹೊರಡಿಸಿದೆ. ಕರ್ನಾಟಕ ಉದ್ಯೋಗ ಮಿತ್ರ ಸಿಂಗಲ್ ವಿಂಡೋ ಸಿಸ್ಟಮ್ (Single Window System) ಮೂಲಕ ಅನುಮೋದಿತವಾದ ಪ್ರಸ್ತಾವನೆಗಳಿಗೆ ಈ ಹೊಸ ಕಾಲಾವಧಿ ಅನ್ವಯಿಸುತ್ತದೆ. |
| ಆ | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಮಹಾನಗರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತು ಎಷ್ಟು ಪ್ರಸ್ತಾವನೆಗಳು ಸರ್ಕಾರಕ್ಕೆ ಸ್ವೀಕೃತವಾಗಿದೆ; ಇದರಲ್ಲಿ, ಎಷ್ಟು ಪ್ರಸ್ತಾವನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ; | ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 281 ಪ್ರಸ್ತಾವನೆಗಳು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ (SLSWCC) ಸಭೆಯ ಅನುಮೋದನೆಗಾಗಿ ಸ್ವೀಕೃತವಾಗಿದ್ದು, ಇವುಗಳ ಪೈಕಿ 2023-24 ರಿಂದ ಇಲ್ಲಿಯವರೆಗೆ (ಫೆಬ್ರವರಿ-2026 ರ ಅಂತ್ಯದವರೆಗೆ) ಒಟ್ಟು 68 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. |
| ಇ | ರಾಜ್ಯದ ಮಹಾನಗರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ರೂಪಿಸಿರುವ ಮಾನದಂಡಗಳೇನು? | ರಾಜ್ಯದ ಮಹಾ ನಗರಗಳಲ್ಲಿ ಸ್ಥಾಪಿಸುವ ಕೈಗಾರಿಕೆಗಳು ಬಂಡವಾಳ ಅನುಸಾರವಾಗಿ ಸಂಬಂಧಿತ ಏಕ ಗವಾಕ್ಷಿ ಅನುಮೋದಿತ ಸಮಿತಿಗಳಿಂದ ಅನುಮೋದನೆ ಪಡೆಯ ಬೇಕಾಗಿರುತ್ತದೆ.<br><br>Change of Land Use ಹಾಗೂ Conversion ಅವಶ್ಯಕತೆ ಇದ್ದಲ್ಲಿ ಅದನ್ನು ಮಾಡಿಸಿಕೊಂಡು ಹಾಗೂ ಸಂಬಂಧಪಟ್ಟ ಇತರ ಅನುಮತಿ/ಅನುಮೋದನೆ ಪತ್ರಗಳನ್ನು ಪಡೆದು, ಕೈಗಾರಿಕೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.<br><br>ಆದರೆ, ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ Change of Land Use ಹಾಗೂ Conversion ಅವಶ್ಯಕತೆ ಇರುವುದಿಲ್ಲ ಮತ್ತು ಸಂಬಂಧಪಟ್ಟ ಇತರ ಅನುಮತಿ/ಅನುಮೋದನೆ ಪತ್ರಗಳನ್ನು ಪಡೆದು ಕೈಗಾರಿಕೆಗಳನ್ನು ಅನುಷ್ಠಾನಗೊಳಿಸಬಹುದಾಗಿದೆ. |

ಸಿಐ 68 ಎಸ್‌ಪಿಐ 2026

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು